

ವರ್ಷ ಇಷ್ಟು ಚಳಿಯಿರಲಿಲ್ಲ' ಎಂದವರು ಹೆಂಡತಿಯ ಕಡೆ ನೋಡಿದರು. ಅಡುಗೆಮನೆ ಒಲೆಯುರಿಯಿಂದಾಗಿ ಸಾಕಷ್ಟು ಬೆಚ್ಚಗಿತ್ತು.

ಅವರು ಮಂದಾಸನದ ಮುಂದೆ ಕೂತುಕೊಳ್ಳುತ್ತ, 'ಹೌದೇನೋ ನೀನು ದೇವನಹಳ್ಳೀಗೆ ಹೋಗ್ತಾ ಇರೋದು? ನನ್ ಶಾಲು ತೊಗೊಂಡ್‌ಹೋಗು. ಅಲ್ಲಿ ತುಂಬಾ ಚಳಿ ಇರುತ್ತೆ' ಎಂದರು – ಹೂವಿನ ಬುಟ್ಟಿಯನ್ನು ಪಕ್ಕಕ್ಕೆ ಎಳೆದುಕೊಂಡು ಪಂಚಪಾತ್ರೆ, ಉದ್ದರಣೆ, ಊದಿನಕಡ್ಡಿ, ಅಕ್ಷತೆಯ ಬಟ್ಟಲು ಎಲ್ಲವನ್ನೂ ಜೋಡಿಸಿಕೊಳ್ಳುತ್ತ.

ಇವತ್ತು ಸಾಂಬಮೂರ್ತಿಯ ಕಾರ್ಯ. ಅದೇ ಗಂಗವಾರದ ಅರ್ಚಕರ ಮಗ. ಪಾಪ ಅಂಥ ಅರ್ಚಕರಿಗೆ ಇಂಥ ಕಷ್ಟ ಬರಬೇಕೆ. ಇವತ್ತು ಇರ್ಸಾಲು ಇರೋದರಿಂದ ದೇವನಹಳ್ಳಿಗೆ ಹೋಗಬೇಕು. ಇಲ್ಲದಿದ್ದರೆ ಅವರಲ್ಲಿಗೆ ಹೋಗಿ ಹೆಗಲು ಕೊಟ್ಟು ಬರಬಹುದಾಗಿತ್ತು ಎಂದರು ರಂಗನಾಥರಾಯರು.

ಎಷ್ಟು ವರ್ಷ ಆಗಿತ್ತು ಸಾಂಬಮೂರ್ತಿಗೆ? ಎಂದು ಕೇಳಿದರು ಬಾಲಕೃಷ್ಣನ ಅಮ್ಮ.

ಇಪ್ಪತ್ತನಾಲ್ಕೋ ಇಪ್ಪತ್ತೈದೋ. ಹುಚ್ಚುಹುಡುಗ. ದಕ್ಷಿಣ ಪಿನಾಕಿನಿಯಲ್ಲಿ ಸುಳಿ ಇದೆ ಅಂತ ಗೊತ್ತಿದ್ದೂ ನೀರಿಗೆ ಧುಮುಕುವುದೇ?

ತುಂಬಾ ಒಳ್ಳೆ ಹುಡುಗ. ಅರ್ಚಕರ ಮನೆಯವರೆಲ್ಲ ಒಳ್ಳೇಯವರೇ. ಪಾಪ ಆ ಸಿಸ್ಟರ್ ರೋಸಿ... ಎಂದವರೇ ಅಲ್ಲಿ ಮಗ ಇದ್ದನೆಂಬ ಅರಿವಾಗಿ ತಕ್ಷಣ ಬಾಯಿ ಮುಚ್ಚಿಕೊಂಡರು.

ಬಾಲಕೃಷ್ಣನಿಗೆ ಅದೇನೂ ಹೊಸದಲ್ಲ. ಸೂಲಿಬೆಲೆಯಲ್ಲಿ ಪ್ರತಿ ಗುರುವಾರ ಸಂತೆ ನಡೆಯುತ್ತಿತ್ತಷ್ಟೆ. ಒಮ್ಮೆ ಸಂತೆಗೆ ಹೋಗಿ ಬೆಲ್ಲ, ಬೇಳೆ